

ಗರ್ಭಿಣಿಯರ ಹೊಟ್ಟೆಯೊಳಗೆ ಬೆಳೆಯುವ ಶಿಶುವಿನ ಸುತ್ತ ಅದರ ರಕ್ಷಣೆಗಾಗಿ ನಿಸರ್ಗವೇ ನಿರ್ಮಿಸಿದ ಜೀವಜಲವೊಂದಿರುತ್ತದೆ. ಅದೇ ನೆತ್ತಿನೀರು ಅಥವಾ ಗರ್ಭಜಲ.

■ ಡಾ. ವೀಣಾ ಭಟ್, ಭದ್ರಾವತಿ

# ಗರ್ಭಜಲ

## ಒಡಲೊಳಗಿನ ಜೀವರಕ್ಷಕ

ಇಂದು ನೆತ್ತಿ ನೀರು ಅಥವಾ ಗರ್ಭ ಜಲದ (ತಲಬಟ್ಟಲ ನೀರು) ಬಗ್ಗೆ ಬಹಳಷ್ಟು ಭಾವೀ ಮಾತೆಯಂದಿರು ತಪ್ಪು ಕಲ್ಪನೆಯನ್ನು ಹೊಂದಿರುತ್ತಾರೆ. ಒಬ್ಬ ಗರ್ಭಿಣಿಗೆ ನೆತ್ತಿನೀರು ಬತ್ತಿ ಹೋಗಿತ್ತಂತೆ, ಅದಕ್ಕೆ ಸಿಸೇರಿಯನ್ ಎಂಟೂವರೆ ತಿಂಗಳಿಗೆ ಮಾಡಿದ್ರಂತೆ, ಇನ್ನೊಬ್ಬರಿಗೆ ನೀರು ಹೋಗಿ ಒಂದು ದಿನ ಆದ್ಮೇಲೆ ಸಿಸೇರಿಯನ್ ಹೆರಿಗೆ ಮಾಡಿದ್ದಂತೆ, ಮತ್ತೊಬ್ಬಳಿಗೆ ನೆತ್ತಿ ನೀರು ಜಾಸ್ತಿ ಇದ್ದು ಒಮ್ಮೆಲೆ ಒಡೆದು ಹೊಕ್ಕಳಬಳ್ಳಿ ಹೊರಬಂದು ತಕ್ಷಣ ಸಿಸೇರಿಯನ್ ಆಗಿ ಮಗು ತೆಗೆದರೂ ಮಗು ಹೋಗೇಬಿಡ್ತಂತೆ. ಸಿಸೇರಿಯನ್ ಮಾಡಿದರೂ ಮಗುವನ್ನು ವೆಂಟಿಲೇಟರ್ ಮೇಲೆ ಇಟ್ಟಿದ್ದಾರಂತೆ.... ಹೀಗೆ ಹಲವಾರು ರೀತಿಯ ಆಪಾದನೆಗಳನ್ನು ದಿನನಿತ್ಯ ಕೇಳುತ್ತಲೇ ಇರುತ್ತೇವೆ.

### ಏನಿದು ನೆತ್ತಿನೀರು ಅಥವಾ ಗರ್ಭಜಲ?

ನೆತ್ತಿನೀರು ಅಥವಾ ಗರ್ಭಜಲ ಅಥವಾ ಅಮ್ನಿಯಾಟಿಕ್ ದ್ರವ ಎಂದರೆ ಭ್ರೂಣದಲ್ಲಿರುವ ಶಿಶುವಿನ ಸುತ್ತ ಇರುವ ಅತ್ಯದ್ಭುತವಾದ ಬೆಂಬಲ ವ್ಯವಸ್ಥೆ ಅಥವಾ ತಲಬಟ್ಟಲ ನೀರು ಎಂದೂ ಕರೆಯುತ್ತಾರೆ. ಈ ಗರ್ಭಜಲ ಗರ್ಭಕೋಶದೊಳಗೆ ಪ್ರತಿ 3 ಗಂಟೆಗೊಮ್ಮೆ